C.C.. No. 1563/2025 CW: 5 ,PW:3

**1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿಯವರ ನ್ಯಾಯಾಲಯ ಪುತ್ತೂರು , ದ.ಕ.**

ಸಿ.ಸಿ. ನಂಃ 1563/2025
ಸಿ.ಡಬ್ಲ್ಯೂಃ 5
ಪಿ.ಡಬ್ಲ್ಯೂಃ 3

| | |
|---|---|
| ಸಾಕ್ಷಿದಾರರ ಹೆಸರುಃ | ರೆಮಂತ್ |
| ತಂದೆಯ ಹೆಸರುಃ | ಗಿರಿಧರ ಗೌಡ |
| ವಯಸ್ಸುಃ | 30 ವರ್ಷ |
| ಉದ್ಯೋಗಃ | ಕೃಷಿ |
| ವಾಸಸ್ಥಳಃ | ಪುತ್ತೂರು ಕಸಬ ಗ್ರಾಮ |

ದಿನಾಂಕ 23-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿಯ ಪರಿಚಯ ಇಲ್ಲ. ನನ್ನ ತಾಯಿಯ ಮಾಲೀಕತ್ವದಲ್ಲಿ ಹಿರೋ ಸ್ಲೆಂಡರ್ ಬೈಕ್ ಇತ್ತು. ಅದನ್ನು ನಾನು ಬಳಸುತ್ತೇನೆ. ಅದರ ನೋಂದಣಿ ಸಂಖ್ಯೆ ನೋಡದೆ ಹೇಳಲು ಆಗುವುದಿಲ್ಲ. ಆರೋಪಿ ಪೊಲೀಸರೊಂದಿಗೆ ಏರು ಧ್ವನಿಯಲ್ಲಿ ಮಾಡಿ ಕೈ ಮುಷ್ಟಿ ಹಿಡಿದು ಹಲ್ಲೆ ಮಾಡಲು ಪ್ರಯತ್ನಿಸಿ ಅವರ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಸುಮಾರು ಒಂದು ವರ್ಷದ ಹಿಂದೆ ನನಗೆ ಮತ್ತು ನಾನು ಓಡಿಸುತ್ತಿದ್ದ ಬೈಕ್ ನಲ್ಲಿ ಹಿಂಬದಿ ಸವಾರನಾಗಿದ್ದ ವ್ಯಕ್ತಿಯ ಮೇಲೆ ಹೆಲ್ಮೆಟ್ ಧರಿಸಲಿಲ್ಲ ಎಂದು ದಂಡ ಪಾವತಿ ಮಾಡಿದ್ದೆನು. ಈ ಘಟನೆ ಸಂಬಂಧ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಮತ್ತು ನಾನು ಈ ಬಗ್ಗೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ತಮಗೆ ಪಾಟೀ ಸವಾಲು ಮಾಡಲು ಅವಕಾಶ ನೀಡಬೇಕೆಂದು ಕೋರಿದ್ದು , ವಾದವನ್ನು ಆಲಿಸಿ, ದಾಖಲೆಗಳನ್ನು ಪರಿಶೀಲಿಸಿದ ನಂತರ ಸದರಿ ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 09-02-2025 ರಂದು ನಾನು ನನ್ನ ತಾಯಿಯ ಬಾಬ್ತು ಕೆಎ-21-ಸಿ-3378 ವಾಹನದಲ್ಲಿ ನನ್ನ ಸ್ನೇಹಿತನಾದ ಆರೋಪಿಯನ್ನು ಸಹಸವಾರನಾಗಿ ಕುಳ್ಳಿರಿಸಿಕೊಂಡು ಕುಂಬ್ರ ಕಡೆಯಿಂದ ಪುತ್ತೂರು

ಕಡೆಗೆ ಹೋಗುತ್ತಿರುವಾಗ ಆರ್ಯಾಪು ಗ್ರಾಮದ ಸಂಪ್ಯ ಎಂಬಲ್ಲಿ ಸಂಜೆಯ ಹೊತ್ತು 05.40 ಗಂಟೆಗೆ ಚಾ.ಸಾ.1 ರವರು ಅವರ ಸಿಬ್ಬಂದಿಗಳೊಂದಿಗೆ ವಾಹನ ತಪಾಸಣೆ ಮಾಡುತ್ತಿದ್ದರು ಎಂದರೆ ಸರಿ. ಆಗ ಚಾ.ಸಾ.1 ರವರು ನನ್ನ ವಾಹನವನ್ನು ನಿಲ್ಲಿಸಿ , ನನ್ನ ವಾಹನದ ಹಿಂಬದಿ ಸವಾರ ಹೆಲ್ಮೆಟ್ ಧರಿಸಿಲ್ಲ, ದಂಡ ಕಟ್ಟಿ ರಾಜಿ ಮಾಡಿಕೊಳ್ಳಬಹುದಾಗಿದೆ ಎಂದು ತಿಳಿಸಿದಾಗ ನಾನು ಸ್ಥಳದಲ್ಲಿಯೇ ರೂ. 500/- ದಂಡ ಪಾವತಿ ಮಾಡಿ ರಶೀದಿ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಸಂಜೆ 06.00 ಗಂಟೆ ಸಮಯಕ್ಕೆ ನ್ಯಾಯಾಲಯದ ಮುಂದಿರುವ ಆರೋಪಿಯು ಇದರಿಂದ ದ್ವೇಷಗೊಂಡು ಚಾ.ಸಾ.1 ರವರ ಮುಂದೆ ಬಂದು ನಾನು ದಂಡ ಪಾವತಿಸುವುದಿಲ್ಲ , ನೀವು ಏನು ಬೇಕಾದರೂ ಮಾಡಿಕೊಳ್ಳಿ , ನಿಮಗೆ ಕಣ್ಣು ಕಾಣಿಸುವುದಿಲ್ಲ ಎಂದು ಜೋರಾಗಿ ಬೊಬ್ಬೆ ಹಾಕಿ ಹೆದ್ದಾರಿಯಲ್ಲಿ ಬ್ಯಾರಿಕೇಡ್ ಹಾಕಿ ವಾಹನ ತಪಾಸಣೆ ಮಾಡಲು ನಿಮಗೆ ಅಧಿಕಾರ ಕೊಟ್ಟಿದ್ದು ಯಾರು? ನಿಮ್ಮಂತಹ ದರಿದ್ರ ಪೊಲೀಸರು ಏನು ಡ್ಯೂಟಿ ಮಾಡುತ್ತೀರಾ, ಗೊತ್ತಿದೆ , 24 ಗಂಟೆ ರಸ್ತೆಯಲ್ಲಿ ನಿಂತು ದಂಡ ಹಾಕಿ ಎಂದು ಚಾ.ಸಾ.1 ರವರನ್ನು ಉದ್ದೇಶಿಸಿ ಮುಷ್ಟಿ ತೋರಿಸಿ ಗುದ್ದಲು ಮುಂದಾಗಿ ಏಕವಚನದಲ್ಲಿ ಏರು ಧ್ವನಿಯಲ್ಲಿ ಮಾತನಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಆಗ ನಾನು ಆರೋಪಿಯನ್ನು ಸಮಾಧಾನ ಪಡಿಸಿದರೂ ಕೂಡಾ ನನ್ನ ಮಾತನ್ನು ಲೆಕ್ಕಿಸದೇ ನೀನು ಜನರಿಗೆ ಹೇಗೆ ಕೇಸು ಹಾಕುತ್ತೀರಾ ನಾನು ನೋಡಿಕೊಳ್ಳುತ್ತೇನೆ ಎಂದು ಇತರ ವಾಹನಗಳನ್ನು ತಪಾಸಣೆ ಮಾಡದಂತೆ ಚಾ.ಸಾ.1 ಹಾಗೂ ಅವರ ಸಿಬ್ಬಂದಿಗಳೊಂದಿಗೆ ಗಲಾಟೆ ಮಾಡಿ ಕರ್ತವ್ಯಕ್ಕೆ ಅಡ್ಡಿ ಉಂಟುಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಸ್ಥಳದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ.

ಈ ಬಗ್ಗೆ ದಿನಾಂಕ 10-02-2025 ರಂದು ಈಗ ನನಗೆ ಓದಿ ಹೇಳಿದಂತೆ " ನಾನು ಈ ಮೇಲಿನ ವಿಳಾಸದಲ್ಲಿ ---------------------------------- ---------------- ಮುಂದಕ್ಕೆ ನೋಡಿದರೆ ಗುರುತಿಸುತ್ತೇನೆ ' ಎಂದು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿ.ಪಿ.3 ಎಂದು ಗುರುತಿಸಲಾಯಿತು. ಆರೋಪಿ ನನ್ನ ಸ್ನೇಹಿತನಾದ ಕಾರಣ ಅತನನ್ನು ಶಿಕ್ಷೆಯಿಂದ ರಕ್ಷಿಸುವ ಸಲುವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಂ.ಪಿ.ಕೆ. ವಕೀಲರಿಂದಃ**

ಏನೂ ಇರುವುದಿಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿ, ಪುತ್ತೂರು ದ.ಕ.